ಅದನ್ನು ರಿಪೇರಿ ಮಾಡಲಿಕ್ಕೆ ಪಿ.ಡಬ್ಲ್ಯೂ.ಡಿ.ಯವರಿಗೆ ಕಾಗದ ಬರೆದಿದ್ದೇನೆ. ಹೆಂಚುಗಳು ಒಡೆದು ಹೋದುದರಿಂದ ಮಳೆಗಾಲದಲ್ಲಿ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ತ್ವರಿತವಾಗಿ ರಿಪೇರಿ ಕಾರ್ಯವನ್ನು ಮುಗಿಸಬೇಕೆಂದು ಬರೆದಿದ್ದೇನೆ.

(16) ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಬಳ ಜಾಸ್ತಿ ಮಾಡುವ ಬಗ್ಗೆ

ಶ್ರೀಮತಿ ಸುಮಾ ವಸಂತ್.—ದಿನಾಂಕ 23-7-1985ನೇ ದಿವಸ ಮುಖ್ಯ ಮಂತ್ರಿಗಳ ಬಳಿಗೆ ರಾಜ್ಯ ಅಂಗನವಾಡಿಯ ಕಾರ್ಯಕರ್ತೆಯರು ಜಾಥಾ ಹೊರಡಿಸಿದ್ದಾರೆಂದು ವರದಿ ಬಂದಿದೆ. ರಾಜ್ಯದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಪರಿಸ್ಥಿತಿ ಚಿಂತಾಜನಕವಾಗಿದ್ದು, ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಪವಿತ್ರ ಕೆಲಸ ಮಾಡುವ ಅವರಿಗೆ, ಸಂಬಳ ಸಾರಿಗೆ ಸರಿಯಾಗಿ ಸಿಗುತ್ತಿಲ್ಲ. ಜೊತೆಗೆ ಕೆಲಸ ಖಾಯಂ ಆಗುವ ಯಾವುದೇ ಸಾಧ್ಯತೆಯ ಬಗ್ಗೆ ಸರಕಾರ ಗಮನ ಹರಿಸುತ್ತಿಲ್ಲ. ಅಂಗನವಾಡಿ ಕಾರ್ಯಕರ್ತೆಯರ ಈ ಗೋಳಿನ ಪರಿಸ್ಥಿತಿಯನ್ನು ಕೂಡಲೇ ಗಣನೆಗೆ ತೆಗೆದುಕೊಂಡು ಈಗಾಗಲೇ ವಜಾ ಆದವರನ್ನು ಕೂಡಲೇ ನಿಯಮಿಸಿಕೊಳ್ಳುವ ದಿಶೆಯಲ್ಲಿ ಸರಕಾರ ಗಮನಹರಿಸಬೇಕೆಂದು ಸರಕಾರದ ಗಮನ ಈ ಮೂಲಕ ಸೆಳೆಯುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇದು ಕೇಂದ್ರ ಸರಕಾರದ ಕಾರ್ಯಕ್ರಮ. ಕಾರ್ಯಕರ್ತೆಯರಿಗೆ ಗೌರವ ಧನ ಮುಂತಾದವುಗಳನ್ನು ಕೇಂದ್ರ ಸರಕಾರದ ಮಾರ್ಗಸೂಚಿಯ ಮೂಲಕ ಮಾಡಲಾಗುತ್ತದೆ. ಅಂಗನವಾಡಿಯ ಕಾರ್ಯಕರ್ತೆಯವರನ್ನು ಹಳ್ಳಿಯಿಂದಲೇ ನೇಮಕ ಮಾಡಲಾಗುತ್ತಿದೆ ಅಂಗನವಾಡಿ ಸಮಾಜದ ಒಂದು ಕಾರ್ಯಕ್ರಮವಾದುದರಿಂದ ಇದರಲ್ಲಿ ಸರಕಾರ ಕೂಡಾ ಭಾಗಿಯಾಗಿದೆ. ಈ ಕಾರ್ಯಕರ್ತೆಯರನ್ನು ಸರಕಾರಿ ನೌಕರರೆಂದು ಪರಿಗಣಿಸಿಲ್ಲ ಎಲ್ಲಾ ರೀತಿಯಲ್ಲೂ ಕಾರ್ಯಕರ್ತೆಯರಿಗೆ ಸಹಾಯ ನೀಡಲು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಅವರು ಸಮಾಜದ ಕಾರ್ಯಕರ್ತೆಯರು ಆಗಿರುವುದರಿಂದ ಅವರಿಗೆ ನಿವೃತ್ತಿ ವಯಸ್ಸನ್ನು ನಮೂದಿಸಿಲ್ಲ. ವಜಾ ಆಗಿರುವ ಕಾರ್ಯಕರ್ತೆಯರಿಗೆ ಅನ್ಯಾಯ ಆಗಿದೆ ಎಂದು ಕಂಡು ಬಂದಲ್ಲಿ ಸರಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ಶ್ರೀ ಕೆ. ಹೆಚ್ ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಪ್ರಸ್ತಾಪ ಮಾಡ ಬಯಸುತ್ತೇನೆ. ದಯವಿಟ್ಟು ಅವಕಾಶ ಕೊಡಿ. ನಮ್ಮ ಪ್ರಧಾನಿಯವರು ಪಂಜಾಬ್ ಬಿಕ್ಕಟ್ಟನ್ನು....

ಅಧ್ಯಕ್ಷರು.—ದಯವಿಟ್ಟು ಈಗ ಬೇಡ. ಸದನದ ಕಾರ್ಯಕಲಾಪಗಳು ಆಜೆಂಡಾದ ಪ್ರಕಾರ ಮಾಡಲಿಕ್ಕೆ ಬೇಕು. ಅದು ಬಿಟ್ಟು ನೀವು ಏನಾದರೂ ಹೇಳುತ್ತೇನೆಂದು ಹೇಳಿದರೆ ಆಗುವುದಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ಹಿಂದೆ ಕೂಡಾ ಹೀಗೆ ಆಗಿದೆ.....

ಅಧ್ಯಕ್ಷರು.—ಇಲ್ಲ, ಶ್ರೀನಿವಾಸ್‌ರವರೇ ಪ್ರತಿಯೊಂದಕ್ಕೂ ಹೀಗೆ ಹೇಳಬಾರದು. ಸುಮ್ಮನೇ ಏನಾದರೂ ಹೇಳಬೇಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರೇ, ನಾನು ಏನಾದರೂ ಹೇಳುತ್ತಿಲ್ಲ. ಒಂದು ವೇಳೆ ನಾನು ಹೇಳಿದುದು ಅಯೋಗ್ಯ ಆದರೆ ನೀವು ನನ್ನನ್ನು ಹೊರಕ್ಕೆ ಹಾಕಿ.

ಅಧ್ಯಕ್ಷರು.—ನೋಟೀಸ್ ಕೊಡಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೋಟೀಸ್ ಕೊಡುವುದಕ್ಕೆ ಬರುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಈ ವಿಷಯಗಳು ರಿಕಾರ್ಡಿಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಬಂಗಾರಪ್ಪನವರು ಏನು ಹೇಳುತ್ತೀರಿ ?

(xvii) ವಿಷಯ : ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆ ಬಗ್ಗೆ ಪ್ರಧಾನಿಯವರು ಮಾಡಿದ ಒಪ್ಪಂದ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ವಿಶೇಷವಾಗಿ ಏನಾದರೂ ಒಂದು ಘಟನೆ, ತೀರ್ಮಾನ ಹಾಗೇನಾದರೂ ನಡೆದಾಗ, ಕೆಲವೊಮ್ಮೆ ನಿರ್ಣಯಗಳ ಮುಖಾಂತರ ಇಂತಹ ವಿಷಯಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ರಾಜ್ಯದ ಮತ್ತು ರಾಷ್ಟ್ರದ ದೃಷ್ಟಿಯಿಂದ ತೆಗೆದುಕೊಂಡಿದ್ದಾರೆ ಅಂಥ ದಾಖಲೆಗಳು ನಮ್ಮಲ್ಲಿ ಇದ್ದಾವೆ. ರಾಷ್ಟ್ರದ ಐಕ್ಯತೆ, ಸಮಗ್ರತೆ ಬಗ್ಗೆ ವಿಚಾರ ಮಾಡತಕ್ಕಂತಹವರು